
SBRR MAHAJANA FIRST GRADE COLLEGE (AUTONOMOUS)



ಕನ್ನಡಪ್ರಭ

# ಮಹಾಜನ ಕಾಲೇಜಿನಲ್ಲಿ ಸದ್ಭಾವನಾ ದಿನಾಚರಣೆ



• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಜನ್ಮ ದಿನದ ನೆನಪಿಗಾಗಿ ಮಂಗಳವಾರ ಸದ್ಭಾವನಾ ದಿನವನ್ನು ಆಚರಿಸಲಾಯಿತು.

ಕಾಲೇಜಿನ ಪ್ರಾಂಶುಪಾಲೆ ಡಾ.ಬಿ.ಆರ್. ಜಯಕುಮಾರಿ ಮಾತನಾಡಿ, ಎಲ್ಲಾ ಧರ್ಮಗಳು, ಭಾಷೆಗಳು ಮತ್ತು ಪ್ರದೇಶಗಳ ಜನರಲ್ಲಿ ರಾಷ್ಟ್ರೀಯ ಏಕೀಕರಣ ಹಾಗೂ ಕೋಮು ಸೌಹಾರ್ದತೆಯನ್ನು ಉತ್ತೇಜಿಸುವುದು ಈ ದಿನದ ವಿಶೇಷತೆಯಾಗಿದೆ. ರಾಜೀವ್ ಗಾಂಧಿಯವರು ಏಕತೆಯ ಪ್ರಬಲ ಪ್ರತಿಪಾದಕರಾಗಿದ್ದು, ವಿವಿಧ ಸಮುದಾಯಗಳು ಮತ್ತು ಪ್ರದೇಶಗಳ ನಡುವಿನ ಬಾಂಧವ್ಯವನ್ನು ಬಲಪಡಿಸಲು ಅವಿರತವಾಗಿ ಶ್ರಮಿಸಿದರು ಎಂದರು.

ಸದ್ಭಾವನಾ ದಿನಾಚರಣೆಯು ನ್ಯಾಯ, ಸಹಾನುಭೂತಿ ಮತ್ತು ತಿಳುವಳಿಕೆಯ ತತ್ವಗಳನ್ನು ಗೌರವಿಸುವ ಮತ್ತು ಎತ್ತಿ ಹಿಡಿಯುವ ರಾಷ್ಟ್ರದ ಭಾವನೆಗಳನ್ನು ಪ್ರತಿಧ್ವನಿಸುವ ಒಂದು ಏಕೀಕೃತ ಅಂತರ್ಗತ ಸಮಾಜದ ಆದರ್ಶಗಳೊಂದಿಗೆ ಸಂಯೋಜಿತವಾಗಿದೆ. ವೈವಿಧ್ಯತೆಯಲ್ಲಿ ಏಕತೆಯನ್ನು ಅನುಸರಿಸುವ ನಮ್ಮ ದೇಶದ ಮಹತ್ವವನ್ನು ಅವರು ಹೇಳಿದರು.

ಯುವಜನತೆಗೆ ಸೌಹಾರ್ದತೆಯ ಮನೋಭಾವದ ಅವಶ್ಯಕತೆ ಹಾಗೂ ಅಗತ್ಯತೆಯನ್ನು ತಿಳಿಸುವುದರ ಜೊತೆಗೆ ಮಾನವೀಯತೆಯನ್ನು ಮರೆತಿರುವ ಜನರು ಮಾನಸಿಕವಾಗಿ ವಿಕಸನಗೊಳ್ಳ ಬೇಕಾಗಿರುವುದು ಅನಿವಾರ್ಯ ಎಂದು ಅವರು ಹೇಳಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾನಿಲಯದ ಶಿಕ್ಷಕರಾದ ಡಾ.ಬಿ.ಕೆ. ಸಾಧನಾ ಮಾತನಾಡಿ, ಜಾತಿ, ಧರ್ಮ, ಭಾಷೆ, ಪ್ರಾದೇಶಿಕತೆಗಳ ಹೆಸರಿನಲ್ಲಿ ಒಡೆದು ಹೋಗುತ್ತಿರುವ ನಮ್ಮ ದೇಶಕ್ಕೆ ಏಕತೆಯನ್ನು ತಂದು ಕೊಡುವುದೇ ಸೌಹಾರ್ದತೆ ಮತ್ತು ಸದ್ಭಾವನೆಗಳು. ಈ ನಿಟ್ಟಿನಲ್ಲಿ ಮಾಜಿ ಪ್ರಧಾನಿ ದಿ. ರಾಜೀವ್ ಗಾಂಧಿಯವರು ಏಕತೆಯ ಪ್ರಬಲ ಪ್ರತಿಪಾದಕರಾಗಿದ್ದು, ವಿವಿಧ ಸಮುದಾಯಗಳು ಮತ್ತು ಪ್ರದೇಶಗಳ ನಡುವಿನ ಭಾಂದವ್ಯವನ್ನು ಬಲಪಡಿಸಲು ಅವಿರತವಾಗಿ ಶ್ರಮಿಸಿದರು ಎಂದು ತಿಳಿಸಿದರು.

ಬಿ.ಕೆ. ಯೋಗೀಶ್ವರಿ, ಎನ್‌ಎಸ್‌ಎಸ್ ಸ್ವಯಂ ಸೇವಕರು, ವಿದ್ಯಾರ್ಥಿಗಳು ಇದ್ದರು. ರಾಷ್ಟ್ರೀಯ ಸೇವಾ ಯೋಜನಾ ಘಟಕದ ಕಾರ್ಯಕ್ರಮಾಧಿಕಾರಿಗಳಾದ ಡಾ.ಜಿ. ದೊಡ್ಡರಸಯ್ಯ ಸ್ವಾಗತಿಸಿದರು, ಡಾ.ಸಿ.ಎಸ್. ಸಿದ್ಧರಾಜು ವಂದಿಸಿದರು. ಆರ್. ಅಂಕಿತಾ ನಿರೂಪಿಸಿದರು.

MYSORE CITY Edition Edition
Aug 22, 2024 Page No. 04
Powered by: erelego.com

Dated on 20-08-2024 Sadbhava Dina and Pledge Programme all NSS Units Organized at College Premises. NSS Volunteers Participated the Sadbhavana Dina Pledge Pgramme.

ತಮ್ಮ ನಂಬುಗೆಯ

ರಾ.ಸೇ.ಯೋ. ಕಾರ್ಯಕ್ರಮ ಸಂಯೋಜನಾಧಿಕಾರಿ

Programme Co-ordinator
National Service Scheme
NSS Bhavan
Sahukar Chennaiah Road
Opp. Saraswathipuram Police Station
Saraswathipuram, Mysuru-09